ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಶುಕ್ರವಾರ 8ನೇ ಮಾರ್ಚ್ 1996ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 9.30 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ರಮೇಶ್ ಕುಮಾರ್) ಅವರು ಪೀಠವನ್ನು ಅಲಂಕರಿಸಿದ್ದರು.

ಪ್ರಕಟಣೆ

ಅಧ್ಯಕ್ಷರು : ನಿನ್ನೆಯ ದಿವಸ ವಿಧಾನಸಭೆಯ ವಿಷಯ ಸಮಿತಿಗಳ ರಚನೆ ಹಾಗೂ ಇತರೆ ನಿಯಮಗಳಿಗೆ ಸಂಬಂಧಿಸಿದಂತೆ, ತಿದ್ದುಪಡಿಗಳಿಗೆ ಸಂಬಂಧಿಸಿದಂತೆ ಸಭೆಯು ಅನುಮೋದನೆ ನೀಡಿತ್ತು. ವಿಷಯ ಸಮಿತಿಗಳ ರಚನೆಗೆ ಸಂಬಂಧಿಸಿದಂತೆ, ಪ್ರತಿಯೊಂದು ವಿಷಯ ಸಮಿತಿಯಲ್ಲೂ ಒಂಬತ್ತು ಜನ ಸದಸ್ಯರಿರಬೇಕೆಂದು, ವಿಧಾನಸಭೆಯಿಂದ ಏಳು ಜನಕ್ಕಿಂತ ಹೆಚ್ಚಾಗದಂತೆ ಸದಸ್ಯರನ್ನು ಸಭಾಧ್ಯಕ್ಷರು ನಾಮನಿರ್ದೇಶನಗೊಳಿಸಬೇಕೆಂದು ಹಾಗೂ ವಿಧಾನಪರಿಷತ್ತಿನಿಂದ ಇಬ್ಬರು ಸದಸ್ಯರನ್ನು ಸಭಾಪತಿಗಳು ನಾಮನಿರ್ದೇಶನ ಮಾಡಬೇಕೆಂದು ಅಂಗೀಕಾರ ಪಡೆಯಲಾಗಿತ್ತು. ಈ ಬಗ್ಗೆ ಮೇಲ್ಮನೆಯಲ್ಲಿಯೂ ಸಹ ಚರ್ಚೆಯಾಗಿ ವಿಧಾನಸಭೆಯಲ್ಲಿ ಏಳು ಜನ ಸದಸ್ಯರನ್ನು ಹಾಗೂ ವಿಧಾನಪರಿಷತ್ತಿನಿಂದ ಮೂರು ಜನ ಸದಸ್ಯರನ್ನು ನಾಮ ನಿರ್ದೇಶನ ಮಾಡಬೇಕೆಂದು ಅಂಗೀಕಾರ ನೀಡಿದ್ದಾರೆ. ಕಾರಣ ಈ ಪ್ರಸ್ತಾವನೆಗೆ ಸದನವು ಒಪ್ಪುವುದೆಂದು ಭಾವಿಸುತ್ತೇನೆ.

ಸಭೆಯ ಮುಂದಿದಲಾದ ಕಾಗದಪತ್ರಗಳು

I. ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಕಂದಾಯ ಮಂತ್ರಿ ಅವರ ಪರವಾಗಿ;

1964ನೇ ಸಾಲಿನ ಕರ್ನಾಟಕ ಭೂಕಂದಾಯ ಅಧಿನಿಯಮದ ಪ್ರಕರಣದ 194(2)ನೇ ಕಲಮಿನ ಮೇರಗೆ; ವಿಜಾಪುರದ ಜಿಲ್ಲೆಯ ಬಾದಾಮಿ ತಾಲ್ಲೂಕಿನ 97 ಗ್ರಾಮಗಳ 1994-95ನೇ ಸಾಲಿನ ಭೂ ಕಂದಾಯ 77, 368.99 ರೂಪಾಯಿಗಳನ್ನು ಮನ್ನಾ ಮಾಡುವ ಸಂಬಂಧದಲ್ಲಿ ದಿನಾಂಕ 2-2-1996 ರಂದು ಹೊರಡಿಸಲಾದ ಆರ್‌ಡಿ 286 ಟಿಆರ್‌ಎಂ 95ನೇ ಕ್ರಮಾಂಕದ ಅಧಿಸೂಚನೆಯನ್ನು ಮಂಡಿಸುತ್ತೇನೆ.

II. ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)